ಗೋಮಾತೆ

ಮಹನೀಯರೇ,

**– ಡಾ ॥ ಎ.ವಿ ನಾಗಸಂಪಿಗ**

ಭಾರತೀಯ ಸಂಸ್ಕೃತಿಯಲ್ಲಿ ಗೋವು ಎಲ್ಲರಿಗೂ ಪರಮಪೂಜ್ಯವಾದುದು. ಪ್ರತಿದಿನ ಬೆಳಗಾದ ಕೂಡಲೆ ಎಲ್ಲರಿಗೂ ಬೇಕಾಗುವ ಹಾಲಿಗೆ ಮೂಲಾಧಾರವೆ ಗೋವು. ಹಾಲಿಲ್ಲದ ಜೀವನವನ್ನು ಕಲ್ಪಿಸಿಕೊಳ್ಳುವುದು ಅಸಾಧ್ಯ. ಗೋವಿನ ಹಾಲು ನಾನಾವಿಧ ರೋಗಗಳಿಗೆ ಮದ್ದು ಎಂದು ಇಂದು ವೈಜ್ಞಾನಿಕವಾಗಿ ಸಾಬೀತಾದ ವಿಷಯ. ಬದುಕಿರುವವರೆಗೂ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ನಮ್ಮೆಲ್ಲರಿಗೂ ಹಾಲನ್ನು ನೀಡುತ್ತಿರುವ ಗೋಮಾತೆಯ ರಕ್ಷಣೆಗೆ ನಾವೆಲ್ಲರೂ ಇಂದು ಕೈಜೋಡಿಸಬೇಕಾದ ಅಗತ್ಯವಿದೆ. ಪ್ರತಿಯೊಬ್ಬರೂ ತಮ್ಮ ತಾಯಿಯ ಹಾಲನ್ನು ಶೈಶವಾಸ್ಥೆಯಲ್ಲಿ ಕುಡಿಯುವರು. ಆದರೆ, ಗೋಮಾತೆಯ ಹಾಲನ್ನು ಪ್ರತಿಯೊಬ್ಬರೂ ಬದುಕಿರುವವರೆಗೂ ಸೇವಿಸುತ್ತಿರುವುದು ಗೋಮಾತೆಯ ಮಹತ್ವವನ್ನು ಮನಗಾಣಿಸುತ್ತಿದೆ.

ಇಂತಹ ಗೋಮಾತೆಯ ಹತ್ಯೆಯನ್ನು ತಡೆಯಲು ಮಾನನೀಯ ರಾಜ್ಯಪಾಲರು ಕರ್ನಾಟಕ ಸರ್ಕಾರದ ಪ್ರಸ್ತಾವಕ್ಕೆ ಈ ತನಕ ಅನುಮೋದನೆ ನೀಡಿರುವುದಿಲ್ಲ. ಈಗಾಗಲೇ ನೂರಾರು ಅಪೂರ್ವ ಗೋತಳಿಗಳು ವಿನಾಶಗೊಂಡಿವೆ. **ಗೋಮಾತೆಯ ಹತ್ಯೆಯನ್ನು ನಾವು ಬಲವಾಗಿ ಪ್ರತಿಭಟಿಸದಿದ್ದರೆ ಗೋಹತ್ಯೆಯ ಪಾಪದಲ್ಲಿ ಸಮಭಾಗಿಗಳಾಗುತ್ತೇವೆ.** ಇದು ಮಹಾಭಾರತದ ಸಂದೇಶ ಹಾಗೂ ಆದೇಶ. ದ್ರೌಪದಿಯ ವಸ್ತ್ರಾಪಹರಣಪ್ರಸಂಗದಲ್ಲಿ ಅದನ್ನು ಖಂಡಿಸಿದ ವಿದುರನ ಮನೆಗೆ ಶ್ರೀಕೃಷ್ಣನಾಗಮಿಸಿ ಆತಿಥ್ಯ ಸ್ವೀಕರಿಸಿದ ಸಂಗತಿ ತಮಗೆ ತಿಳಿದಿದೆ. ಜ್ಞಾನಿಗಳಾದ ಭೀಷ್ಮ, ದ್ರೋಣ, ಧೃತರಾಷ್ಟ್ರರ ಆತಿಥ್ಯ ಸ್ವೀಕರಿಸದಿರಲು ಅವರ ಅನ್ಯಾಯವನ್ನು ಪ್ರತಿಭಟಿಸದಿರುವುದೇ ಕಾರಣವೆಂಬುದು ಮಹಾಭಾರತದಲ್ಲಿ ಕಾಣುವ ನಗ್ನ ಸತ್ಯ.

ಈ ಹಿನ್ನೆಲೆಯಲ್ಲಿ ನಾವೆಲ್ಲ ಸೇರಿ ದಿನಾಂಕ – 16.03.2013 ಸರಿಯಾಗಿ ಬೆ.10.30ಕ್ಕೆ ಪುಟ್ಟಣ್ಣಶೆಟ್ಟಿ ಪುರಭವನದಿಂದ 'ಗೋಹತ್ಯಾನಿಷೇದ ಕಾನೂನನ್ನು ಜಾರಿಗೊಳಿಸುವುದಕ್ಕೆ' ಹೊರಟ ಬೃಹತ್ ಮೆರವಣಿಗೆಯಲ್ಲಿ ಭಾಗವಹಿಸಿ ನಮ್ಮ ವೈಯಕ್ತಿಕ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ದಯವಿಟ್ಟು ಕುಟುಂಬದ ಎಲ್ಲ ಸದಸ್ಯರೂ ತಪ್ಪದೆ ಈ ಮೆರವಣಿಗೆಯಲ್ಲಿ ಭಾಗವಹಿಸಿರಿ. ನಿಮಗೆ ತಿಳಿದವರನ್ನು ಕರೆತನ್ನಿರಿ. ಮೂವತ್ಮೂರು ಕೋಟಿ ದೇವತೆಗಳ ಸನ್ನಿಧಾನವುಳ್ಳ ಗೋಮಾತೆಯ ಸೇವೆ ಶ್ರೀಕೃಷ್ಣನ ಸೇವೆ ಎಂಬುದನ್ನು ಮರೆಯದಿರಿ.